





ಪಿಕ್ಚರ್ ಪ್ಯಾಲೆಸ್



# ಬಾನಾಡಿಗಳ ಲೋಕ

ಬೇಟೆಗಾಗಿ ಕಾದು ಕುಳಿತಿದ್ದ ಪಕ್ಷಿಗಳು ಒಂದೆಡೆಯಾದರೆ, ನೀರಾಟವಾಡುತ್ತಿದ್ದ ಪಕ್ಷಿಗಳು ಮತ್ತೊಂದೆಡೆ. ಬಂಡೆಯ ಮೇಲೆ ಕುಳಿತಿದ್ದ ಪೆಲಿಕಾನ್‌ಗಳ ಗುಂಪು ಮತ್ತೂ ಆಕರ್ಷಕವಾಗಿ ಕಾಣುತ್ತಿದ್ದವು. ಪುಟ್ಟ ರೆಕ್ಕೆಗಳನ್ನು ಬಿಚ್ಚಿ ಹಾರುತ್ತಿದ್ದ ಕಿಂಗ್‌ಫಿಶರ್ ಇನ್ನೂ ಅದ್ಭುತವಾಗಿ ಕಾಣುತ್ತಿತ್ತು.

ನಗರದ ಕುಕ್ಕರಹಳ್ಳಿ ಕೆರೆ, ಕಾರಂಜಿಕೆರೆ ಹಾಗೂ ಶ್ರೀರಂಗಪಟ್ಟಣ ಸಮೀಪದ ರಂಗನತಿಟ್ಟನಲ್ಲಿ ಬಾನಾಡಿಗಳ ಸುಂದರ ಲೋಕವನ್ನು ಸೆರೆಹಿಡಿದಿದ್ದಾರೆ ಕುವೆಂಪು ನಗರದ ಹವ್ಯಾಸಿ ಛಾಯಾಗ್ರಾಹಕ ಶ್ರೇಯಸ್ ದೇವನೂರು.



## ಮುನ್ನೋಟ

### ಮೇ 18, ಶನಿವಾರ

**ಬುದ್ಧ ಪೂರ್ಣಿಮೆ ವಿಶೇಷ**



ಭಾರತ್ ಮೂಲ ನಿವಾಸಿ ಫೌಂಡೇಷನ್ ವತಿಯಿಂದ ಮೇ18 ರಂದು ಬುದ್ಧ ಪೂರ್ಣಿಮೆ ಉತ್ಸವ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 10.30ಕ್ಕೆ ಪುರ ಭವನದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಭೀಮ ಮತ್ತು ಬುದ್ಧ ರಥದ ಮೆರವಣಿಗೆಗೆ ಚಾಲನೆ ನೀಡಲಾಗುವುದು.

ಮಧ್ಯಾಹ್ನ 2ರಿಂದ ಕಲಾ ಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಸಚಿವ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಗತಿಪರ ಚಿಂತಕರಾದ ಪ್ರೊ.ಕೆ.ಎಸ್.ಭಗವಾನ್, ಪ್ರೊ. ಮಹೇಶ್‌ಚಂದ್ರಗುರು ಹಾಗೂ ಕೃಷ್ಣಮೂರ್ತಿ ಚಮರಂ 'ಬುದ್ಧ ದರ್ಶನ' ವಿಚಾರ ಕುರಿತು ಮಾತನಾಡಲಿದ್ದಾರೆ. ಪಿಎಂಸಿ ಉಪಾಧ್ಯಕ್ಷ ಚಿಕ್ಕಜವರಪ್ಪ, ಸೋಮಯ್ಯ ಇತರರು ಪಾಲ್ಗೊಳ್ಳಲಿದ್ದಾರೆ.

**ಅಖಿಲ ಭಾರತ ಯುವಜನ ಟ್ರಸ್ಟ್**

ಮೇ18ರ ಸಂಜೆ 5ಕ್ಕೆ ಭಗಿನಿ ಸೇವಾ ಸಮಾಜದಲ್ಲಿ ಬುದ್ಧ ಪೂರ್ಣಿಮೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ದಕ್ಷಿಣ ಪ್ರಾಂತ ಸಂಘಚಾಲಕ್ ವೆಂಕಟರಾಮಾಜೀ ಕಾರ್ಯಕ್ರಮವನ್ನು ಉದ್ಘಾಟಿಸಲ್ಲಿದ್ದು, ಎಸ್.ರಾಮಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ.

**'ಭಾವ ರಾಗ ಯಾನ'**

ವಿಜಯನಗರದಲ್ಲಿರುವ ದೀಕ್ಷಿತ್ ಆರೋಗ್ಯ ಧಾಮವು ಬುದ್ಧ ಪೂರ್ಣಿಮೆ ಅಂಗವಾಗಿ ಮೇ 18ರಂದು 'ಭಾವ ರಾಗ ಯಾನ' ವಿಶೇಷ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಸಂಜೆ 6ಕ್ಕೆ ವಿದ್ವಾನ್ ರಾಕೇಶ್ ಅವರು ಕೊಳಲು ವಾದನ ಕಾರ್ಯಕ್ರಮ ಪ್ರಸ್ತುತಪಡಿಸಲಿದ್ದು, ಇವರಿಗೆ ವಿದ್ವಾನ್ ವಿಕ್ರಮ್ ಭಾರದ್ವಾಜ್ (ಮೃದಂಗ), ವಿದ್ವಾನ್ ಸ್ಕಂದ ಎಂ.ವಿ. (ರಿದಮ್ ಪ್ಯಾಡ್) ವಾದ್ಯ ಸಹಕಾರ ನೀಡಲಿದ್ದಾರೆ. ಡಾ.ಸಿ.ಎಸ್.ಅನಿಲ್ ಕುಮಾರ್ ಅವರು ವ್ಯಾಖ್ಯಾನ ನೀಡಲಿದ್ದಾರೆ.

**'ಶ್ರೀಮದ್ಭಗವದ್ಗೀತಾ'**

ನಗರದ ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಮೇ 18ರಂದು 'ಶ್ರೀಮದ್ಭಗವದ್ಗೀತಾ' ಕುರಿತು ಉಪನ್ಯಾಸ ಆಯೋಜಿಸಲಾಗಿದೆ.

ಅಂದು ಸಂಜೆ 6ಕ್ಕೆ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣದಲ್ಲಿ, ಸ್ವಾಮಿ ಶಾಂತಿ ವ್ರತಾನಂದ ಅವರು ಉಪನ್ಯಾಸ ನೀಡುವರು.

**ಬೆಳದಿಂಗಳ ಸಂಗೀತ**

ಸುತ್ತೂರು ಶ್ರೀ ಮಠದಲ್ಲಿ ಮೇ18ರಂದು ಸಂಜೆ 6 ಗಂಟೆಗೆ ವಿದ್ವಾನ್ ಪಟ್ಟಾಭಿರಾಮ ಪಂಡಿತ್ ಅವರ ಬೆಳದಿಂಗಳ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ವಿದ್ವಾನ್ ಪಟ್ಟಾಭಿರಾಮ ಪಂಡಿತ್ ಅವರು ಆಕಾಶವಾಣಿಯ 'ಎ' ಗ್ರೇಡ್ ಕಲಾವಿದರಾಗಿದ್ದು, ಯುವ ಪುರಂದರ ಪ್ರಶಸ್ತಿ, ಸತ್ಯಶ್ರೀ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಉಸ್ತಾದ್ ಬಿಸ್ಮಿಲ್ಲಾಖಾನ್ ಸಂಸ್ಮರಣ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ವಿದ್ವಾನ್ ಮೈಸೂರು ಡಾ.ಚಂದನ್‌ಕುಮಾರ್, ವಿದ್ವಾನ್ ಎಚ್.ಎಸ್. ಸುಧೀಂದ್ರ ಹಾಗೂ ವಿದ್ವಾನ್ ಕೆ.ಯು.ಜಯಚಂದ್ರರಾವ್ ವಾದ್ಯ ಸಹಕಾರ ನೀಡಲಿದ್ದಾರೆ.



ಪಟ್ಟಾಭಿರಾಮ ಪಂಡಿತ್

### ಮೇ 19, ಭಾನುವಾರ

**'ಕಲಿಯುಗದ ವ್ಯಾಸ ಶ್ರೀ ಮಹೇಂದ್ರನಾಥ ಗುಪ್ತ'**

ನಗರದ ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಮೇ 19ರಂದು 'ಕಲಿಯುಗ ವ್ಯಾಸ ಶ್ರೀ ಮಹೇಂದ್ರನಾಥ ಗುಪ್ತ' ಕುರಿತು ಉಪನ್ಯಾಸ ಆಯೋಜಿಸಲಾಗಿದೆ.

ಅಂದು ಸಂಜೆ ಸಂಜೆ 6ಕ್ಕೆ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣದಲ್ಲಿ, ಸ್ವಾಮಿ ಶಾಂತಿ ವ್ರತಾನಂದ ಅವರು ಉಪನ್ಯಾಸ ನೀಡುವರು.

**'ಚಾರ್ಲಿ ಚಾಪ್ಲಿನ್' ಕೃತಿ ಲೋಕಾರ್ಪಣೆ**

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಹಿಳಾ ಘಟಕ ಹಾಗೂ ಸ್ನೇಹ ಸಿಂಚನ ಟ್ರಸ್ಟ್ ವತಿಯಿಂದ ಮೇ 19ರಂದು ಕೆ.ಎಸ್ ಪ್ರದೀಪ್ ಕುಮಾರ್ ಅವರ 'ಚಾರ್ಲಿ ಚಾಪ್ಲಿನ್' ಕೃತಿ ಲೋಕಾರ್ಪಣೆ ಹಾಗೂ ಅಮ್ಮನ ದಿನಾಚರಣೆ ಅಂಗವಾಗಿ ಆಹ್ವಾನಿತ ಕವಿಗಳಿಂದ ಕವಿಗೋಷ್ಠಿ ಹಮ್ಮಿಕೊಂಡಿದೆ.

ಮೇಯರ್ ಪುಷ್ಪಲತಾ ಜಗನ್ನಾಥ್ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಿದ್ದು, ಡಾ.ಮಂಜುಳಾ ಉಮೇಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ.ಕೆ.ರಘುರಾಂ ವಾಜಪೇಯಿ ಕೃತಿ ಲೋಕಾರ್ಪಣೆ ಮಾಡವರು.

ಸ್ಥಳ: ಕಸಾಪ ಭವನ, ವಿಜಯನಗರ. ಬೆಳಿಗ್ಗೆ 10ಕ್ಕೆ.

## ಆರ್ಟಿಕ್ಯುಲೇಟ್ ನೃತ್ಯೋತ್ಸವ

ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಗಾನ ಭಾರತೀ ವೀಣೆ ಶೇಷಣ್ಣ ಭವನದಲ್ಲಿ ಮೇ 19ರಂದು ಸಂಜೆ 6ಕ್ಕೆ 36ನೇ ಆರ್ಟಿಕ್ಯುಲೇಟ್ ನೃತ್ಯೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಮೈಸೂರು ಬಿ.ನಾಗರಾಜ್ ಕಾರ್ಯಕ್ರಮ ಸಂಯೋಜಿಸಿದ್ದಾರೆ.

ಈ ವಿಶೇಷ ನೃತ್ಯೋತ್ಸವದಲ್ಲಿ ಗುರು ಕಾಶೀನಾಥ್ ರೌಲ್ ಅವರ ಶಿಷ್ಯ ದೇಬಾಶಿಶ್ ಪಟ್ನಾಯಕ್, ನೃತ್ಯ ಗುರು ಜೀವನ್ ಅವರ ಶಿಷ್ಯ ಕಾಳಿದಾಸ್ ಎಸ್. ಪಾನಿಕರ್, ಮುರಾರಿ ಶರಣ್ ಗುಪ್ತಾ ಅವರ ಶಿಷ್ಯ ಹಾಗೂ ಕಥಕ್ ಕಲಾವಿದ ನಿಶಾಂತ್ ಪಾನಿಕರ್ ಮತ್ತು ನಾಟ್ಯ ಗುರು ಡಾ.ಶಾಂತಾರಾಂ ಶಿಷ್ಯ ಶಮಂತ್ ಎಸ್.ರಾವ್ ಅವರು ಒಡಿಸ್ಸಿ, ಭರತನಾಟ್ಯ, ಕಥಕ್ ಹಾಗೂ ಕೂಚಿಪುಡಿ ಪ್ರದರ್ಶಿಸಲಿದ್ದು, ಕಲಾ ರಸಿಕರಿಗೆ ನೃತ್ಯದ ಮೆರುಗು ನೀಡಲಿದ್ದಾರೆ.

ಮಾಹಿತಿಗೆ ಮೊ:9341288391 ಸಂಪರ್ಕಿಸಬಹುವುದು.



## 'ನೀ ನಾನಾದ್ರೆ ನಾ ನೀನೇನಾ' ಎಂಬ ಹಾಸ್ಯ ಚಟಾಕಿ

ನಾರಾಯಣ ಕಿಕ್ಕೇರಿ

ಬೆಂಗಳೂರಿನ ಸ್ಪರ್ಶ ಥಿಯೇಟರ್ ತಂಡವು ಈಚೆಗೆ ಮೈಸೂರಿನ ಕಿರು ರಂಗಮಂದಿರದಲ್ಲಿ ಗಗನ್‌ಪ್ರಸಾದ್ ಅವರ ನಿರ್ದೇಶನದ ವಿಲಿಯಂ ಷೇಕ್‌ಸ್ಪಿಯರ್‌ನ 'ಕಾಮಿಡಿ ಆಫ್ ಎರರ್ಸ್' ಆಧಾರಿತ ನಾಟಕ 'ನೀ ನಾನಾದ್ರೆ ನಾ ನೀನೇನಾ' ನಾಟಕ ಪ್ರದರ್ಶನಗೊಂಡಿತು. ಇದನ್ನು ಕನ್ನಡಕ್ಕೆ ರೂಪಾಂತರಿಸಿದವರು ಎನ್. ಸುರೇಂದ್ರನಾಥ್. ಈ ಕಥೆ ಈಗಾಗಲೇ ನಾಟಕವಾಗಿ ಹಾಗೂ ಚಲನಚಿತ್ರವಾಗಿಯೂ ಜನಪ್ರಿಯವಾಗಿದೆ.

ನಿಜ ಜೀವನದಲ್ಲಿ ಅವಳಿ ಮಕ್ಕಳ ಗುರುತು ಪತ್ತೆ ಹಚ್ಚುವಲ್ಲಿ ಆಗುವ ಗೊಂದಲವೇ ಈ ನಾಟಕದ ಕಥಾವಸ್ತು. ಚಿಕ್ಕರಾಯ ಮತ್ತು ಚಿಕ್ಕವಾತಾಪಿ ಎಂಬ ಇಬ್ಬರು ಪಾತ್ರಧಾರಿಗಳು ವಹಿವಾಟು ಆರಂಭಿಸಲು ಬೆಂಗಳೂರಿನ ಮಲ್ಲೇಶ್ವರಕ್ಕೆ ಬರುತ್ತಾರೆ. ಜಗಳವಾಡಿ ಮನೆ ಬಿಟ್ಟು ಹೋದ ಗಂಡ ದೊಡ್ಡರಾಯ, ಹೆಂಡತಿಯನ್ನು ಒಲಿಸಿಕೊಳ್ಳಲು ರತನ್‌ಲಾಲ್ ಬಳಿ ಚಿನ್ನದ ಸರ ಮಾಡಲು ಹೇಳಿರುತ್ತಾನೆ. ಈ ವೇಳೆ ವಹಿವಾಟು ಮಾಡಲು ಬೆಂಗಳೂರಿಗೆ ಬಂದಿರುವ ಚಿಕ್ಕರಾಯ, ದೊಡ್ಡರಾಯನ ಮನೆಗೆ ಬಂದು ಸೇರುತ್ತಾನೆ.

ರತನ್‌ಲಾಲ್ ಅವನ ಶಿಷ್ಯ ಚಿನ್ನಸ್ವಾಮಿ ಬಳಿ ದೊಡ್ಡರಾಯರ ಆಳು ದೊಡ್ಡವಾತಾಪಿಗೆ ಸರ ನೀಡಿ, ಅವನಿಂದ ₹ 20ಸಾವಿರ ತರಲು ಹೇಳುತ್ತಾನೆ. ಅದರಂತೆ ಚಿನ್ನಸ್ವಾಮಿ ದೊಡ್ಡವಾತಾಪಿಗೆ ಸರ ನೀಡಲು ತೆರಳಿದಾಗ, ದಾರಿ ಮಧ್ಯೆ ವಹಿವಾಟು ನಡೆಸಲು ಬೆಂಗಳೂರಿಗೆ ಬಂದಿದ್ದ ಚಿಕ್ಕವಾತಾಪಿಯೇ ದೊಡ್ಡವಾತಾಪಿಯೆಂದು ಭಾವಿಸಿ ಅವನಿಗೆ ಸರವನ್ನು ಕೊಡುತ್ತಾನೆ.

ಈ ಅದಲು ಬದಲಿನ ಹೆಣಿಗೆಯಲ್ಲಿ ಯಾರು, ಯಾರು? ಎಂಬ ಗೊಂದಲವೇ ಪ್ರೇಕ್ಷಕರನ್ನು ಕಾಡುತ್ತದೆ. ಇಲ್ಲಿ ಬರುವ ಎಲ್ಲಾ ಪಾತ್ರಗಳು ಒಂದೆಡೆ ಸಮಾಗಮವಾದಾಗ ಗುಟ್ಟು ಬಯಲಾಗುತ್ತದೆ. ಎಲ್ಲರೂ ಮಾರ್ತಾಂಡರಾಯನ ಸಂತಾನಕ್ಕೆ ಹುಟ್ಟಿರುವ ಅವಳಿ ಮಕ್ಕಳೆಂದು. ನಾಟಕದ ಉದ್ದಕ್ಕೂ ನಡೆಯುವ ಘಟನೆಗಳು ಹಾಸ್ಯದ ತಿರುವು ಪಡೆದು ಪ್ರೇಕ್ಷಕರನ್ನು ನಕ್ಕು ನಲಿಸುತ್ತದೆ.

ನಾಟಕದಲ್ಲಿ ದ್ವಿಪಾತ್ರಗಳನ್ನು ಒಮ್ಮೆಲೇ ತರುವುದು ಕಷ್ಟ. ಆದರೆ ನಿರ್ದೇಶಕರು ಈ ಪ್ರಸಂಗಗಳನ್ನು ನಾಜೂಕಾಗಿ ನಿಭಾಯಿಸಿದ್ದಾರೆ. ದೊಡ್ಡರಾಯ ಚಿಕ್ಕರಾಯನ ವ್ಯತ್ಯಾಸಕ್ಕಾಗಿ ಒಂದು ಸಸ್ಪೆಂಡರ್ ಬೆಲ್ಟ್, ದೊಡ್ಡ ವಾತಾಪಿ, ಚಿಕ್ಕ ವಾತಾಪಿಯ ವ್ಯತ್ಯಾಸಕ್ಕಾಗಿ ಒಂದು ಮಫ್ಲರ್ ನೀಡಿ ಕುತೂಹಲಕರ ಪ್ರಸಂಗಗಳನ್ನು ಹೆಣೆದು ಇವರ ಪತ್ತೆ ಹಚ್ಚಲು ಪ್ರೇಕ್ಷಕರನ್ನು ದಿಕ್ಕು ತಪ್ಪಿಸುತ್ತಾರೆ. ಇಲ್ಲಿ ಬರುವ ಚುರುಕು ಸಂಭಾಷಣೆಗಳು ಪ್ರೇಕ್ಷಕರಿಗೆ ಕಚಗುಳಿಯಿಡುತ್ತವೆ. ನಾಟಕದ ಓಟಕ್ಕೆ ಸಂಚಲನ ತರುತ್ತವೆ. ಪ್ರತಿ ದೃಶ್ಯಗಳ ಬದಲಾವಣೆಯಲ್ಲೂ ಇಡೀ ತಂಡದ ನಟರನ್ನೆಲ್ಲಾ ಬಳಸಿ ಓಡಾಡಿಸಿ ದೃಶ್ಯ ಬದಲಾವಣೆ ಮಾಡುತ್ತಾ ಹಾಡಿನ ಮೂಲಕ ನಾಟಕದ ಕಥೆಗೆ ಓಟ ನೀಡಿರುವ ನಿರ್ದೇಶಕರ ತಂತ್ರ ಮೆಚ್ಚುಗೆಯಾಗುತ್ತದೆ. ಬರೀ ಮಾತಿನಲ್ಲೇ ನಡೆಯುವ ಪ್ರಸಂಗಗಳಿಗೆ ಕ್ರಿಯಾತ್ಮಕ ಸ್ಪರ್ಶ ನೀಡಿದ್ದಾರೆ. ಕಥೆ ಹಳೆಯದಾದರೂ ನಿರೂಪಣಾ ತಂತ್ರ ಹೊಸದೆನಿಸುತ್ತದೆ.

ಮಾರ್ತಾಂಡರಾಯನಾಗಿ ಸಿ.ಎಸ್. ಚೇತನ್ 'ಪುಟ್ಟ ಮಕ್ಕಳು ಪುಟ್ಟ ಪುಟ್ಟ ಮಕ್ಕಳು' ಎಂದು ನಗುನಗುತ್ತಾ ಪಾತ್ರಕ್ಕೆ ಜೀವ ತುಂಬುತ್ತಾರೆ. ದೊಡ್ಡರಾಯ/ಚಿಕ್ಕರಾಯನಾಗಿ ಗಗನ್‌ಪ್ರಸಾದ್ ಲೀಲಾಜಾಲವಾಗಿ ಎರಡೂ ಪಾತ್ರಗಳನ್ನು ನಿಭಾಯಿಸಿದ್ದಾರೆ. ದೊಡ್ಡವಾತಾಪಿ/ಚಿಕ್ಕವಾತಾಪಿಯಾಗಿ ಎಚ್.ಶಮಂತ್ ಎರಡೂ ಪಾತ್ರಗಳ ಮೌಲ್ಯ ಹೆಚ್ಚಿಸಿದ್ದಾರೆ. ರತನ್‌ಲಾಲ್ ಆಗಿ ಸುಮೇದ್, ಚಿನ್ನಸ್ವಾಮಿಯಾಗಿ ಎಂ.ಎಸ್.ನಿಶಾಂತ್ ಅವರ ಪಾತ್ರ ನಿರ್ವಹಣೆ ಗಮನ ಸೆಳೆದವು.

ಮಂಜುನಾರಾಯಣರ ಬೆಳಕು, ಗೌತಮ್ ಅವರ ಪ್ರಸಾಧನ, ಶರತ್ ಮುಂಚತ್ತಾಯರ ಸಂಗೀತ, ವಿನ್ಯಾಸ್, ಗೋಪಿ ಭಟ್ಟರ ಹಾಡುಗಾರಿಕೆ ನಾಟಕದ ಬೆಳವಣಿಗೆಯಲ್ಲಿ ಸಹಕಾರಿಯಾಗಿದ್ದವು. ಪ್ರೇಕ್ಷಕರಿಗೆ ಹಾಸ್ಯ ಚಟಾಕಿ ಹಾರಿಸುತ್ತ, ನಗಿಸುತ್ತಿದ್ದರಿಂದ ನಾಟಕದ ಸಮಯ ಕಳೆದದ್ದೇ ಗೊತ್ತಾಗಲಿಲ್ಲ.

ನಾಟಕ ನೋಟ



'ನೀ ನಾನಾದ್ರೆ ನಾ ನೀನೇನಾ' ನಾಟಕದ ದೃಶ್ಯ

# ಮರವು ನಮಗೆ ಆದರ್ಶವಾಗಬಲ್ಲದೇ?

ಡಾ.ಕೆ.ಎಸ್. ಕಣ್ಣನ್



ಸಾಂದರ್ಭಿಕ ಚಿತ್ರ

ಗಿಡಮರಗಳನ್ನು ಯಾರು ಕಂಡಿಲ್ಲ? ಲೋಕದಲ್ಲಿ ನಾವು ಕಾಣುವ ಮರಗಳೆಲ್ಲ ತಮ್ಮ ಬೇರಿನ ಆಧಾರದ ಮೇಲೆಯೇ ನಿಲ್ಲತಕ್ಕವು. ಬಿತ್ತಿದ ಬೀಜವು ಮೊದಲು ಮಣ್ಣಿನೊಳಗೆ ದೃಢಗೊಂಡು, ಜೊತೆಗೇ ಮಣ್ಣಿನ ಮೇಲ್ಪದರವನ್ನು ಸೀಳಿಕೊಂಡು ಬಂದು ಸಸಿಯಾಗಿ, ಗಿಡವಾಗಿ, ಮರವಾಗಿ ಬೆಳೆಯುತ್ತದೆ. ಮರವು ನಮಗೆ ಕಾಣುವಂತೆ ದೊಡ್ಡದಾಗಿ ಬೆಳೆದಷ್ಟೂ, ಮತ್ತು ಅದಕ್ಕಿಂತ ಮುಖ್ಯವಾಗಿ, ಬೇರು ಭದ್ರವಾಗುತ್ತ ಹೋಗಿರುತ್ತದೆ.

ಮನುಷ್ಯರು ಕಟ್ಟುವ ಕಟ್ಟಡಗಳ ಸಮಾಚಾರ ಬೇರೆ. ಕೆಲವೊಮ್ಮೆ ಬುನಾದಿಯು ಭದ್ರವಾಗಿಲ್ಲವಾಗಿದ್ದು, ಕಟ್ಟಡವು ಬಂದ ಸ್ವಲ್ಪವೇ ಕಾಲಕ್ಕೇ ತಾನೇ ತಾನಾಗಿ ಸೀಳು ತೋರಿ ಕುಸಿದು ಉರುಳಿಬೀಳುವಂತಾಗುವುದು! ಆದರೆ ಗಿಡಮರಗಳು ಹಾಗಾದಾವೆ? ಬುಡವನ್ನು ಭದ್ರಮಾಡಿಕೊಳ್ಳದೆ ಮರವು ಬೆಳೆದುದಿಲ್ಲ. ಬುಡವು ಗಟ್ಟಿಯಾಗುವ ಮುಂಚೆಯೇ ಬೆಳೆದುಕೊಂಡುಬಿಟ್ಟ ತಪ್ಪಿನಿಂದಾಗಿ ಮರವೊಂದು ಉರುಳಿಕೊಂಡಿತು – ಎಂಬುದಾಗಿ ನಾವು ಎಲ್ಲೂ ಕೇಳಿಲ್ಲ (ರೋಗ ಹತ್ತಿದ ಗಿಡದ ಮಾತು ಬೇರೆ). ಕೇಳಲು ಸಾಧ್ಯವೂ ಇಲ್ಲ.

ಮರಗಳು ಅದೆಷ್ಟೆತ್ತರ ಬೆಳೆಯಬಲ್ಲವು! ಎಷ್ಟು ವಿಸ್ತಾರವಾಗಬಲ್ಲವು! ಇಷ್ಟಾಗಿ ನಿಂತ ಜಾಗದಲ್ಲೇ ಎಲ್ಲವನ್ನೂ ವ್ಯವಸ್ಥೆ ಮಾಡಿಕೊಳ್ಳಬಲ್ಲವು! ಬುಡಕ್ಕೆರೆದ ನೀರು ಸಮಸ್ತ ಶಾಖೋಪಶಾಖೆಗಳಿಗೂ ಸಲ್ಲುವುದು.

ಇಡೀ ವೃಕ್ಷವನ್ನು ಕಾಪಾಡುವ ಬೇರು ಮಾತ್ರ ಸಂಕೋಚದಿಂದಲೋ ಎಂಬಂತೆ ತೆರೆಯ ಮರೆಯಲ್ಲೇ – ಎಂದರೆ ನೆಲದ ಅಡಿಯಲ್ಲೇ – ಹುದುಗಿರುವುದು. ಆದರೆ ಬುಡಕ್ಕೇನಾದರೂ ಕೊಡಲಿ ಏಟು ಬಿದ್ದಿತೋ, ಇಡೀ ಮರವೇ ಉರುಳುವುದು: ಮರದ ಕಾಂಡ-ಬೇರುಗಳೇ ಮರದ ಆಧಾರ-ಸ್ತಂಭವಲ್ಲವೇ?

ಕಾಣದ ಬೇರು ಅವ್ಯಕ್ತ, ಕಾಣುವ ಕಾಂಡ-ಶಾಖೆ-ಉಪಶಾಖೆ-ಪುಷ್ಪ-ಫಲಗಳು ವ್ಯಕ್ತ. ವ್ಯಕ್ತವಾದುದರ ಹಿಂದೆ ಆಧಾರಭೂತವಾದ ಅವ್ಯಕ್ತವಿದೆ. ಅವ್ಯಕ್ತವು ವ್ಯಕ್ತವನ್ನು ಸದಾಕಾಲ ರಕ್ಷಿಸುತ್ತದೆ. ಕೊಂಬೆಯೊಂದನ್ನು ಮುರಿದಷ್ಟಕ್ಕೆ ಮರವು ಸತ್ತುಹೋಗಿಬಿಡುವುದಿಲ್ಲ. ಆದರೆ ಮರದ ಬುಡ-ಬೇರುಗಳಿಗೆ ತೀವ್ರವಾದ ಹೊಡೆತ ಬಿತ್ತೋ, ಮರವು ತತ್ತರಿಸಿ ಹೋಗುತ್ತದೆ. ಇದನ್ನೇ 'ಛಿನ್ನೇ ಮೂಲೇ ನೈವ ವೃಕ್ಷಂ ನ ಶಾಖಾ' ಎನ್ನುತ್ತಾರೆ.

ಇದಿಷ್ಟೂ ನಾವು ಸಾಧಾರಣವಾಗಿ ನೋಡುವ ಮರಗಳಿಗೆ ಸಲ್ಲುತ್ತದೆ. ಆದರೆ ಬೇರೊಂದು ವಿಚಿತ್ರವಾದ ಮರವೊಂದಿದೆಯಂತೆ. ಅದನ್ನು ಗೀತೆ-ಉಪನಿಷತ್ತುಗಳು ಹೇಳುತ್ತವೆ. ಅದರ ಬುಡವೇ ಮೇಲಿದೆಯಂತೆ. ಕೊಂಬೆಗಳು ಕೆಳಗಂತೆ!

'ಇಂತಹ ಮರವನ್ನು ಕಂಡಿದ್ದೀರಾ?' – ಎಂಬುದಾಗಿ ಶ್ರೀರಂಗ ಮಹಾಗುರುಗಳು ತಮ್ಮ ಶಿಷ್ಯರನ್ನು ಕೇಳಿದ್ದರು. ಯಾರು ಕಂಡಿರಲು ಸಾಧ್ಯ? ಇಲ್ಲವೆಂದೇ ಉತ್ತರವು ಸಹಜವಾಗಿಯೇ ಬಂದಿತು. 'ನೀವೆಲ್ಲರೂ ಕಂಡೇ ಇರುವಿರಿ, ಕಾಣುತ್ತಲೂ ಇರುವಿರಿ' ಎಂಬ ಗುರುಗಳ ಮುಂದಿನ ಮಾತು ಮತ್ತೂ ಒಗಟಾಗಿಯೇ ಕಂಡಿತು.

"ಅಂತಹ ಮರವು ನೀವೇ ಆಗಿರುವಿರಿ" ಎಂದು ಹೇಳಿ ಮತ್ತೂ ಅಚ್ಚರಿಗೊಳಿಸಿದರು. ಅದು ಹೇಗೆಂದು ಕೇಳಿದ ಶಿಷ್ಯರಿಗೆ ಅವರಿತ್ತ ವಿವರಣೆ ಅದ್ಭುತವಾದದ್ದೇ.

ನಾವೆಲ್ಲರೂ ಮೇಲ್ಬುಡದ ಮರಗಳೇ ಸರಿ ಏಕೆ? ಹೇಗೆ? ನಮ್ಮ ತಲೆಯೇ ಮೂಲ! ನಮ್ಮ ಕೈಕಾಲುಗಳೇ ಶಾಖೆಗಳು! (ತಲೆಯೇ ಮೂಲವೆಂದರೆ, ತಲೆಯೊಳಗಿನ ಮಸ್ತಿಷ್ಕವೇ ಮೂಲವೆಂದು ಅರ್ಥವಷ್ಟೆ). ಅದು ಮರೆಯಲ್ಲಿದ್ದು, ಅವ್ಯಕ್ತವಾಗಿದೆ. ನಮ್ಮ ಮೈ-ಕೈ-ಕಾಲುಗಳೇ ಕಾಂಡ ಹಾಗೂ ಶಾಖೆಗಳು. (ಬೆರಳುಗಳನ್ನು ಉಪಶಾಖೆಗಳೆಂದು ಬೇಕಾದರೆ ಹೇಳೋಣವಂತೆ). ಇವುಗಳು ವ್ಯಕ್ತವಾಗಿವೆ. ವ್ಯಕ್ತವಾದುದೇ ಗೋಚರವಾಗುವುದು. ವ್ಯಕ್ತವಾದುದರಲ್ಲೇ ಚಲನ-ವಲನಗಳಾಗುವುದು. ಕೈಗೋ ಬೆರಳಿಗೋ ಉಗುರಿಗೋ ಘಾತವಾಯಿತೆನ್ನಿ, ಗಾಸಿಯಾಯಿತೆನ್ನಿ, ಅವು ಕತ್ತರಿಸಿಯೇ ಹೋದವೆನ್ನಿ – ಮನುಷ್ಯನಿನ್ನೂ ಬದುಕಿರಬಲ್ಲ! ಆದರೆ ತಲೆ ಹೋಯಿತೋ ಕಥೆ ಮುಗಿಯಿತು!

ತಲೆ ಚೆನ್ನಾಗಿತ್ತೋ, ಮೈಯೆಲ್ಲ ಚೆನ್ನಾಗಿರುವುದು. ತಲೆ ಸರಿಯಿಲ್ಲವೋ ಮೈಯೆಲ್ಲವೂ ಚೆನ್ನಾಗಿದ್ದರೂ ಪ್ರಯೋಜನವಿಲ್ಲ. ವಾಸ್ತವವಾಗಿ ತಲೆಯು ಸರಿಯಿಲ್ಲದಿದ್ದಲ್ಲಿ ಮೈಯೆಲ್ಲಾ ಚೆನ್ನಾಗಿ ಬಹುಕಾಲವಿರಲು ಸಾಧ್ಯವೇ ಇಲ್ಲ! ಎಂದೇ ಶಿರಸ್ತ್ರಾಣ (ಹೆಲ್ಮೆಟ್)ವೆಂದು ತಲೆಗೆ ಮುಖ್ಯ ರಕ್ಷೆ ಕೊಡುವುದು.

ನಮ್ಮ ಸಾಧಾರಣ ಅನಿಸಿಕೆಯೆಂದರೆ ನಾವು ನಿಲ್ಲಲು ಕಾಲೇ ಆಧಾರವೆಂಬುದು. ಅದರೆ ಗುರುಗಳ ಉತ್ತರ ಸಾಧಾರಣ ಅನಿಸಿಕೆಯನ್ನು 'ಬುಡಮೇಲು' ಮಾಡುವಂತಹುದು! ವಿಶೇಷವಾದ ಅರಿವುಳ್ಳ ಜ್ಞಾನಿಗಳ ನೋಟವು ನಮ್ಮ ಸಾಮಾನ್ಯ 'ಅರಿವ'ನ್ನು ತಲೆಕೆಳಗಾಗಿಸಿದರೂ ಮಾರ್ಮಿಕವಾಗಿರುತ್ತದೆ. ಏನು ಇಲ್ಲಿಯ ಮರ್ಮ? ಇದನ್ನು ಮುಂದೆ ನೋಡೋಣ.


## ನೀವೂ ಕಳುಹಿಸಿ



'ಮೆಟ್ರೊ' ಕುಂದುಕೊರತೆ, ಕ್ಯಾಂಪಸ್ ಕಲರವ, ಲೇಖನ ಕಳುಹಿಸಲು...

ಇ ಮೇಲ್: mysoremetro@prajavani.co.in

ವಾಟ್ಸ್‌ಆ್ಯಪ್; 95133 22937